31

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

**ದಿನಾಂಕ:13/07/2016**

**ಪ್ರಕರಣ ಸಂಖ್ಯೆ: ಆರ್‌ಎ 105/2014-15**

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ತಮ್ಮಣ್ಣ ಬಿನ್ ಚಿಕ್ಕಬೈರಪ್ಪ<br>2. ವೆಂಕಟೇಶ್ ಬಿನ್ ಲೇಟ್ ಕೆಂಪಣ್ಣ<br>ಕುರುಗಲ್ ಗ್ರಾಮ<br>ವೇಮಗಲ್ ಹೋಬಳಿ<br>ಕೋಲಾರ ತಾಲ್ಲೂಕು<br>(ಶ್ರೀ ಎಂ.ಮಂಜುನಾಥ್ -ವಕೀಲರು ರವರಿಂದ) | | 1. ಮುನಿಯಪ್ಪ ಬಿನ್ ನಾರಾಯಣಪ್ಪ<br>2. ಕಾಮಾಕ್ಷಮ್ಮ ಕೋಂ ಶ್ರೀನಿವಾಸಪ್ಪ<br>ಕುರುಗಲ್ ಗ್ರಾಮ<br>ವೇಮಗಲ್ ಹೋಬಳಿ<br>ಕೋಲಾರ ತಾಲ್ಲೂಕು<br>3. ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ<br>( ಶ್ರೀ ಬಿ.ಆರ್.ರವೀಂದ್ರ -ವಕೀಲರು ರವರಿಂದ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ:ಆರ್.ಎ 69/2013-14 ದಿನಾಂಕ:30-09-2014. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

******

**ಪ್ರಸ್ತಾವನೆ.**

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 136(3) ಓದಲಾದ ಕಲಂ 50 ರಂತೆ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ, ಕುರುಗಲ್ ಗ್ರಾಮದ ಸರ್ವೆ ನಂ. 297/2 ರ ಜಮೀನಿನ ಹಕ್ಕುಬದಲಾವಣೆ ಕ್ರಮಾಂಕ ಎಂ.ಆರ್.55/2006-07 ದಿನಾಂಕ 02/04/2007 ರ ಆದೇಶದ ವಿರುದ್ಧ ತಮ್ಮಣ್ಣ ಬಿನ್ ಚಿಕ್ಕಬೈರಪ್ಪ ಹಾಗೂ ವೆಂಕಟೇಶ್ ಬಿನ್ ಲೇಟ್ ಕೆಂಪಣ್ಣ ಎಂಬುವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಪ್ರಕರಣ ಸಂಖ್ಯೆ:.ಆರ್.ಎ 69/2013-14 ದಿನಾಂಕ: 30/09/2014 ರಂದು ಹೊರಡಿಸಿದ ಆದೇಶದಲ್ಲಿ ಮೇಲ್ಮನವಿಯನ್ನು ವಜಾಕರಿಸಿರುತ್ತಾರೆ. ಸಹಾಯಕ ಕಮೀಷನರ್ ರವರ ಈ ಆದೇಶದ ವಿರುದ್ಧ ಶ್ರೀ ತಮ್ಮಣ್ಣ ಬಿನ್ ಚಿಕ್ಕಬೈರಪ್ಪ ಹಾಗೂ ವೆಂಕಟೇಶ್ ಬಿನ್ ಲೇಟ್ ಕೆಂಪಣ್ಣ ರವರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸ್ ನೀಡಲಾಯ್ತು.

ದಿನಾಂಕ:29/04/2015 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಮೇಲ್ಮನವಿದಾರರು ಹಾಗೂ ಅವರ ವಕೀಲರು ಹಾಜರು. ದಿನಾಂಕ:17/06/2015 ರಂದು ಉಭಯತ್ರರೂ ಹಾಜರು, 2 ನೇ ಎದರುದಾರರು ಲಿಖಿತ ಆಕ್ಷೇಪಣೆ ಸಲ್ಲಿಸಿರುತ್ತಾರೆ. ದಿನಾಂಕ 13/04/2016 ರಂದು ಉಭಯತ್ರರ ಕೋರಿಕೆಯ ಮೇರೆಗೆ ಆದೇಶಕ್ಕೆ ಕಾದಿರಿಸಲಾಯಿತು. ದಿನಾಂಕ28/04/2016 ರಂದು ಮೇಲ್ಮನವಿದಾರರು ಇವರ ವಕೀಲರೊಂದಿಗೆ ಕಛೇರಿಯಲ್ಲಿ ಸಲ್ಲಿಸಿರುವ ಜ್ಞಾಪನದಲ್ಲಿ ತಿಳಿಸಿರುವಂತೆ ತಾವು ಈಗಾಗಲೇ ನ್ಯಾಯಾಲಯದ ಹೊರಗಡೆ ರಾಜಿಯಾಗಿರುವುದಾಗಿ ತಿಳಿಸಿ ಮೇಲ್ಮನವಿ ಅರ್ಜಿಯನ್ನು ವಜಾಕರಿಸುವಂತೆ ಕೋರಿರುತ್ತಾರೆ.

## ಆದೇಶ

ಮೇಲ್ಮನವಿದಾರರು ಸಲ್ಲಿಸಿರುವ ಜ್ಞಾಪನವನ್ನು ಪುರಸ್ಕರಿಸಿ ಅವರ ಮೇಲ್ಮನವಿ ಅರ್ಜಿಯನ್ನು ಒತ್ತಾಯಿಸದ ಕಾರಣದ ಮೇರೆಗೆ ವಜಾಕರಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:13/07/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

K.V. Thrilokachandra

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

"ನಕಲು ಜಾರಿದೆ"

ಜಿಲ್ಲಾಧಿಕಾರಿಗಳ ಕಚೇರಿ
ಕೋಲಾರ ಜಿಲ್ಲೆ